ಇರತಕ್ಕವರು ಪಶ್ಚಿಮ ಬಂಗಾಳ, ಬಿಹಾರ ಮತ್ತು ಜಾರ್ಖಂಡ್. ಉಳಿದ ಎಲ್ಲಾ ರಾಜ್ಯದವರು ನಮಗಿಂತಲೂ ಮುಂದೆ ಇದ್ದಾರೆ ಎಂಬುದು ಸರ್ವೆ ಮಾಡಿದಾಗ ತಿಳಿದುಬಂದಿದೆ. E-Governance ವಿಚಾರದಲ್ಲಿ ರಾಜ್ಯದಲ್ಲಿ ಸರಿಯಾದ ಒತ್ತು ಕೊಡುತ್ತಿಲ್ಲ. ನಾವು ಮೊದಲನೆಯ ಸ್ಥಾನದಲ್ಲಿ ಇರಬೇಕಾಗಿತ್ತು. ಆದರೆ, ಇಲ್ಲ.

ಅಧ್ಯಕ್ಷರು: ಇದರ ಬಗ್ಗೆ ಅರ್ಧಗಂಟೆ ಚರ್ಚೆಗೆ ಅವಕಾಶ ಕೊಟ್ಟಿದ್ದೇನೆ. ಆಗ ಮಾತನಾಡಿ.

ಶ್ರೀ ದಿನೇಶ್ ಆರ್.ಗುಂಡೂರಾವ್: ಇದು ಮುಖ್ಯವಾದ ವಿಚಾರ. ಮಾಹಿತಿ ತಂತ್ರಜ್ಞಾನಕ್ಕೆ ಮೂಲವಾಗಿರುವ ರಾಜ್ಯದಲ್ಲಿ ನಾವು ಹಿಂದುಳಿದಿದ್ದೇವೆಂದರೆ ಇದರ ಬಗ್ಗೆ ಸರ್ಕಾರ ಗಮನ ಕೊಡುತ್ತಿಲ್ಲವೆಂದು ಆಯಿತು. ಆದ್ದರಿಂದ ದಯವಿಟ್ಟು ಸರ್ಕಾರ ಇದಕ್ಕೆ ಹೆಚ್ಚು ಒತ್ತುಕೊಟ್ಟು ಎಲ್ಲಾ ಹಂತದಲ್ಲೂ ಇದನ್ನು ಹಾಕಲು ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಇಲ್ಲಿ ಕೇವಲ ಕಂಪ್ಯೂಟರೀಕರಣ ಮಾತ್ರವಲ್ಲ, ಆಡಳಿತ ಸುಧಾರಣೆ ಸಹ ಮಾಡಬೇಕು.

ಅಧ್ಯಕ್ಷರು: ಇದರ ಬಗ್ಗೆ ಅರ್ಧಗಂಟೆ ಚರ್ಚೆಗೆ ಕೊಡುತ್ತೇನೆ. ಆಗ ತಾವು ಮಾತನಾಡಿ. ಈಗ ಪ್ರಶ್ನೋತ್ತರ ಮುಗಿಯಿತು. ಇನ್ನು ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಸ್.ಸುರೇಶ್‌ಕುಮಾರ್, ಕಾನೂನು ಮತ್ತು ಸಂಸದೀಯ ಸಚಿವರು: ಮಾನ್ಯ ಅಧ್ಯಕ್ಷರೆ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ 4ನೇ ಪಟ್ಟಿಯಲ್ಲಿರುವ 119 ಪ್ರಶ್ನೆಗಳ ಪೈಕಿ 90 ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು: ಮಂಡಿಸಲಾಯಿತು.

ಅನುಬಂಧ–1

3. ಸಭೆಯ ಮುಂದಿಡಲಾದ ಕಾಗದ ಪತ್ರಗಳು:

I. ಶ್ರೀ ಬಿ.ಎಸ್.ಯಡಿಯೂರಪ್ಪ, ಮಾನ್ಯ ಮುಖ್ಯಮಂತ್ರಿಗಳು: ಮಾನ್ಯ ಅಧ್ಯಕ್ಷರೆ, **1957ರ ಕರ್ನಾಟಕ ಮಾರಾಟ ತೆರಿಗೆ ಕಾಯ್ದೆಯ ಪ್ರಕರಣ 39ರ ಮೇರೆಗೆ:**

ಕರ್ನಾಟಕ ರಾಜ್ಯದಲ್ಲಿ ಮೀನುಗಾರಿಕೆಗೆ ಸಂಬಂಧಪಟ್ಟಂತೆ ಮೀನುಗಾರರು ಮೀನುಗಾರಿಕೆ ಚಟುವಟಿಕೆಗಳಿಗೆ ಬಳಸುವ ಡೀಸೆಲ್ ಮೇಲಿನ ಮಾರಾಟ ತೆರಿಗೆಯನ್ನು ದಿನಾಂಕ 01.04.2009ರಿಂದ ಜಾರಿಗೆ ಬರುವಂತೆ ವಿನಾಯಿತಿ ನೀಡಿ **ದಿನಾಂಕ 30.03.2009ರಂದು** ಹೊರಡಿಸಲಾದ **ಎಫ್‌ಡಿ/63/ಸಿಎಸ್‌ಎಲ್/2009(1)** ನೇ ಸಂಖ್ಯೆಯ ಅಧಿಸೂಚನೆಯನ್ನು ಮಂಡಿಸುತ್ತೇನೆ.

2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮದ ಕಲಂ 89ರ ಮೇರೆಗೆ:

1. 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಕಾಯ್ದೆಯಡಿ ಭತ್ತ, ಅಕ್ಕಿ, ಗೊಧಿ, ದ್ವಿದಳ ಧಾನ್ಯ, ಹಿಟ್ಟು, ಅಕ್ಕಿ ರವೆ, ಗೋಧಿ ಹಾಗೂ ಮೈದಾ ಹಿಟ್ಟು ಇವುಗಳ ಮಾರಾಟದ ಮೇಲಿನ ತೆರಿಗೆಗೆ ದಿನಾಂಕ 01.04.2009ರಿಂದ ಜಾರಿಗೆ ಬರುವಂತೆ ಹಾಗೂ ದಿನಾಂಕ 31.03.2010ರವರೆಗೆ ತೆರಿಗೆ ವಿನಾಯಿತಿ ನೀಡಿ **ದಿನಾಂಕ 30.03.2009ರಂದು** ಹೊರಡಿಸಲಾದ **ಎಫ್‌ಡಿ/63/ಸಿಎಸ್‌ಎಲ್/2009(2)**ನೇ ಸಂಖ್ಯೆಯ ಅಧಿ ಸೂಚನೆ.

2. 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಕಾಯ್ದೆಯಡಿ ಬಜೆ ಹಾಗೂ ಪಾದರಕ್ಷೆಗಳ (ಒಂದು ಜೊತೆಗೆ ನೂರು ರೂಪಾಯಿ ಬೆಲೆ ಬಾಳುವ ಎಲ್ಲಾ ರೀತಿಯ ಪಾದರಕ್ಷೆಗಳಿಗೆ) ಮೇಲಿನ ಮಾರಾಟ ತೆರಿಗೆಯನ್ನು ದಿನಾಂಕ 01.04.2009ರಿಂದ ಜಾರಿಗೆ ಬರುವಂತೆ ತೆರಿಗೆ ವಿನಾಯಿತಿ ನೀಡಿ **ದಿನಾಂಕ 30.03.2009**ರಂದು ಹೊರಡಿಸಲಾದ **ಎಫ್‌ಡಿ/63/ಸಿಎಸ್‌ಎಲ್/2009(3)**ನೇ ಸಂಖ್ಯೆಯ ಅಧಿಸೂಚನೆ.

3. 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಕಾಯ್ದೆಯಡಿ ಹುಣಸೇಹಣ್ಣು, ಸೀಗೆಕಾಯಿ, ತೆಂಗಿನ ಕಾಯಿ, ಕೊಬ್ಬರಿ ಮತ್ತು ಒಣಗಿಸಿದ ತೆಂಗಿನ(ಕೊಬ್ಬರಿ) ಪುಡಿ ಹಾಗೂ ಅಡಿಕೆ ಕಾಯಿ ಇವುಗಳಿಗೆ ಪಾವತಿಸುವ ತೆರಿಗೆಯನ್ನು ದಿನಾಂಕ 01.04.2009ರಿಂದ ಜಾರಿಗೆ ಬರುವಂತೆ ಶೇ. 2ರಷ್ಟು ಕಡಿತಗೊಳಿಸಿ **ದಿನಾಕ 30.03.2009**ರಂದು ಹೊರಡಿಸಲಾದ **ಎಫ್‌ಡಿ/63/ಸಿಎಸ್‌ಎಲ್/2009(4)**ನೇ ಸಂಖ್ಯೆಯ ಅಧಿಸೂಚನೆ.

4. 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಕಾಯ್ದೆಯಡಿಯಲ್ಲಿ 1985ರ ಕೇಂದ್ರ ಅಬಕಾರಿ ಸುಂಕ ಕಾಯ್ದೆಯಲ್ಲಿರುವ ಪ್ರೇ-ಕ್ಯೂರ್ಡ್ ಟ್ರೇಡ್ ರಬ್ಬರ್‌ನ ಶೀರ್ಷಿಕೆ ಮತ್ತು ಉಪ ಶೀರ್ಷಿಕೆ ಸಂಖ್ಯೆ 4008-29-40ನ್ನು ದಿನಾಂಕ 01.04.2009ರಿಂದ ಕೈಗಾರಿಕಾ ಹೂಡೂವಳಿ ಎಂದು ವ್ಯಾಖ್ಯಾನಿಸಿ **ದಿನಾಂಕ 30.03.2009**ರಂದು ಹೊರಡಿಸಲಾದ **ಎಫ್‌ಡಿ/63/ಸಿಎಸ್‌ಎಲ್/2009(5)** ನೇ ಸಂಖ್ಯೆಯ ಅಧಿಸೂಚನೆ.

5. 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಕಾಯ್ದೆಯಡಿ ಕೆಲವು ವಸ್ತುಗಳಿಗೆ ಪಾವತಿಸುವ ತೆರಿಗೆಯನ್ನು ದಿನಾಂಕ 01.04.2009ರಂದು ಜಾರಿಗೆ ಬರುವಂತೆ ಶೇ.4ರಷ್ಟು ಕಡಿಮೆ ಮಾಡಿ **ದಿನಾಂಕ 30.03.2009**ರಂದು ಹೊರಡಿಸಲಾದ **ಎಫ್‌ಡಿ/63/ಸಿಎಸ್‌ಎಲ್/2009(6)** ನೇ ಸಂಖ್ಯೆಯ ಅಧಿಸೂಚನೆ.

6. 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಕಾಯ್ದೆಯಡಿ ವ್ಯಾಪಾರಿಗಳು ಪಾವತಿಸುವ ಕನ್ನಡ ಗಣಕಯಂತ್ರ ಸಾಫ್ಟ್ ವೇರ್ ಮೇಲಿನ ತೆರಿಗೆಗೆ ದಿನಾಂಕ 01.04.2009ರಿಂದ ಜಾರಿಗೆ ಬರುವಂತೆ ವಿನಾಯಿತಿ ನೀಡಿ **ದಿನಾಂಕ 30.03.2009**ರಂದು ಹೊರಡಿಸಲಾದ **ಎಫ್‌ಡಿ/63/ಸಿಎಸ್‌ಎಲ್/2009(9)**ನೇ ಸಂಖ್ಯೆಯ ಅಧಿಸೂಚನೆ.

7. 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಕಾಯ್ದೆಯಡಿ ಆರ್ಗ್ಯಾನಿಕ್ ವೇಸ್ಟ್ ಕನ್‌ವರ್ಟರ್ಸ್ ಮತ್ತು ಪ್ಲಾಸ್ಟಿಕ್ ಟಾರ್ಪಾಲಿನ್ಸ್‌ಗಳಿಗೆ ವ್ಯಾಪಾರಿಯು ಪಾವತಿಸುವ ತೆರಿಗೆಯನ್ನು ದಿನಾಂಕ 01.04.2009ರಿಂದ ಜಾರಿಗೆ ಬರುವಂತೆ ಶೇ.4ಕ್ಕೆ ಇಳಿಸಿ **ದಿನಾಂಕ 30.03.2009**ರಂದು ಹೊರಡಿಸಲಾದ **ಎಫ್‌ಡಿ/63/ಸಿಎಸ್‌ಎಲ್/2009(10)** ನೇ ಸಂಖ್ಯೆಯ ಅಧಿಸೂಚನೆ.

8. 2005ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ನಿಯಮಾವಳಿಗಳ ನಿಯಮ 168ಕ್ಕೆ ತಿದ್ದುಪಡಿ ಮಾಡಿ **30.05.2009**ರಂದು ಹೊರಡಿಸಲಾದ **ಎಫ್‌ಡಿ/265/ಸಿಎಸ್‌ಎಲ್/2008**ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

1976ರ ಕರ್ನಾಟಕ ವೃತ್ತಿ, ವ್ಯಾಪಾರಗಳು, ಕಸುಬುಗಳು ಮತ್ತು ಉದ್ಯೋಗಗಳ ತೆರಿಗೆಗಳ ಕಾಯ್ದೆ ಕಲಂ 33(3)ರ ಮೇರೆಗೆ:

1976ರ ಕರ್ನಾಟಕ ವೃತ್ತಿ, ವ್ಯಾಪಾರಗಳು, ಕಸುಬುಗಳು ಮತ್ತು ಉದ್ಯೋಗಗಳ ತೆರಿಗೆ ಕಾಯ್ದೆಯಡಿ ಹನ್ನೆರಡನೇ ತರಗತಿ ಅಥವಾ ಪದವಿಪೂರ್ವ ಶಿಕ್ಷಣದ ಭೋದಕ ತರಗತಿಗಳನ್ನು ನಡೆಸುತ್ತಿರುವ ಶಿಕ್ಷಣ ಸಂಸ್ಥೆಗಳಿಗೆ ದಿನಾಂಕ 01.04.2009ರಿಂದ ಜಾರಿಗೆ ಬರುವಂತೆ ತೆರಿಗೆ ವಿನಾಯಿತಿ ನೀಡಿ **ದಿನಾಂಕ 30.03.2009**ರಂದು ಹೊರಡಿಸಲಾದ **ಎಫ್‌ಡಿ/63/ಸಿಎಸ್‌ಎಲ್/2009(7)**ನೇ ಸಂಖ್ಯೆಯ ಅಧಿಸೂಚನೆಯನ್ನು ಮಂಡಿಸುತ್ತೇನೆ.

1979ರ ಕರ್ನಾಟಕ ಭೋಗವಸ್ತುಗಳ ಮೇಲಿನ ತೆರಿಗೆಯ ಕಾಯ್ದೆಯ ಕಲಂ 20(ಎ)ರ ಮೇರೆಗೆ:

1979ರ ಕರ್ನಾಟಕ ಭೋಗವಸ್ತುಗಳ ಮೇಲಿನ ತೆರಿಗೆ ಕಾಯ್ದೆಯಡಿ ವಿವಾಹ ಸಭಾಂಗಣಗಳಲ್ಲಿ ಏರ್ಪಡಿಸಲಾಗುವ ಕೈಗಾರಿಕಾ ವಸ್ತುಪ್ರದರ್ಶನಗಳನ್ನು ನಡೆಸಿದಲ್ಲಿ ಅಂತಹ ಸಭಾಂಗಣಕ್ಕೆ ಮಾಲೀಕರು ಪಾವತಿಸುವ ತೆರಿಗೆಗೆ ದಿನಾಂಕ